<u>ಸಾಕ್ಷಿಯನ್ನು ದಿನಾಂಕ **24-06-2025** ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>

<u>ಪಾಟೀ ಸವಾಲುಃ- ಪ್ರತಿವಾದಿ ಪರ ಶ್ರೀ ಎಸ್.ಕೆ. ವಕೀಲರಿಂದ.</u>

ನಾನು ಕರ್ನಾಟಕ ಬ್ಯಾಂಕ್ ಮತ್ತು ಯುನಿಯನ್ ಬ್ಯಾಂಕ್ ನಲ್ಲಿ ಖಾತೆ ಹೊಂದಿರುತ್ತೇನೆ. ನಾನು ಸುಮಾರು 15 ವರ್ಷಗಳಿಂದ ಕರ್ನಾಟಕ ಬ್ಯಾಂಕ್ ನಲ್ಲಿ ಖಾತೆ ಹೊಂದಿರುತ್ತೇನೆ. ನಾನು ಯುನಿಯನ್ ಬ್ಯಾಂಕ್ ನಲ್ಲಿ ಸುಮಾರು 4 ವರ್ಷಗಳಿಂದ ಖಾತೆ ಹೊಂದಿರುತ್ತೇನೆ. 2018 ನೇ ಇಸವಿಯಲ್ಲಿ ನಾನು ಕಾರ್ಪೋರೇಶನ್ ಬ್ಯಾಂಕ್ ನಲ್ಲಿ ಹೊಂದಿರುತ್ತೇನೆ ಅದು ಈಗ ಕರ್ನಾಟಕ ಬ್ಯಾಂಕ್ ಆಗಿರುತ್ತದೆ. 2018 ನೇ ಇಸವಿಯಲ್ಲಿ ನನ್ನ ಖಾತೆಯಲ್ಲಿ ರೂ.70 ಲಕ್ಷ ಹಣ ಇತ್ತೋ ಇಲ್ಲವೋ ನನಗೆ ಗೊತ್ತಿಲ್ಲ. ನಾನು ಬ್ಯಾಂಕ್ ನ ಸ್ಟೇಟ್ ಮೆಂಟ್ ಅನ್ನು ಪಡೆದುಕೊಂಡರೆ ಹಣ ಇತ್ತೋ ಇಲ್ಲವೋ ಎಂದು ಗೊತ್ತಾಗುತ್ತದೆ ಎಂದರೆ ಸರಿ. ನಾನು ಕರ್ನಾಟಕ ಬ್ಯಾಂಕ್ ನಲ್ಲಿ ಕರೆಂಟ್ ಅಕೌಂಟ್ ಹೊಂದಿದ್ದೆ ಮತ್ತು ಅದರ ಲಿಮಿಟ್ ಎಷ್ಟು ಎಂದರೆ ನನಗೆ ಗೊತ್ತಿಲ್ಲ. ನಿ.ಪಿ.-1 ರಂತೆ ಸ್ವತ್ತುಗಳ ಅಳತೆ ಮಾಡಿರುವುದಿಲ್ಲ ಆದರೆ ಕ್ರಯ ಪತ್ರ ಮಾಡುವ ಒಂದು ವಾರ ಮಧ್ಯೆಯೆ ಅಳತೆ ಮಾಡಿಕೊಳ್ಳಬೇಕೆಂದು ಒಪ್ಪಿಕೊಂಡಿರುತ್ತೇವೆ. ಆ ರೀತಿಯಲ್ಲಿ ನಿ.ಪಿ.-1 ರಲ್ಲಿ ಬರೆದಿಲ್ಲ ಎಂದರೆ ಸರಿ. ನಿ.ಪಿ.-1 ರಲ್ಲಿ ಒಂದು ವೇಳೆ ಪ್ರತಿವಾದಿ ದಾಖಲೆಯನ್ನು ಸರಿಪಡಿಸಿಕೊಳ್ಳದೇ ಹೋದರೆ ನಾನು ದಾಖಲೆಗಳನ್ನು ಸರಿಪಡಿಸಿಕೊಳ್ಳಬೇಕೆಂದು 8 ನೇ ನಿಬಂಧನೆಯಲ್ಲಿ ನಮೂದಾಗಿರುತ್ತದೆ ಎಂದರೆ ಸರಿ ಸಾಕ್ಷಿ ಮುಂದುವರೆದು ದಾಖಲೆ ಸರಿಪಡಿಸಿಕೊಳ್ಳಲು ಆಗಿರುವುದಿಲ್ಲ ಎಂದು ನನಗೆ ಹೇಳಿರುವುದಿಲ್ಲ ಎನ್ನುವರು. ದಾಖಲೆ ಸರಿಪಡಿಸಿಕೊಂಡಿದ್ದಿವೋ

ಇಲ್ಲವೋ ಎಂದು ಹೇಳಿ ನಾನು ಪ್ರತಿವಾದಿಗೆ ನೋಟೀಸ್ ನೀಡಿರುವುದಿಲ್ಲ. ದಾವೆ ಸಲ್ಲಿಸುವ ಪೂರ್ವದಲ್ಲಿ ಪ್ರತಿವಾದಿಗೆ ವಕೀಲರ ಮೂಲಕ ನೋಟೀಸ್ ನೀಡಿರುತ್ತೇನೆ ಎಂದರೆ ಸರಿ. ಸದರಿ ನೋಟೀಸ್ ನಲ್ಲಿ ನಾನು ದಾಖಲೆಗಳನ್ನು ನಾನು ನಿಖರವಾಗಿ ತಿಳಿಸಿರುತ್ತೇನೆ ಎಂದರೆ ಸರಿ. ಕ್ರಯ ಪತ್ರವನ್ನು ರದ್ದು ಪಡಿಸುವ ಬಗ್ಗೆ ಅದು ನಮೂದಾಗಿಲ್ಲ ಎಂದರೆ ಸರಿ. ಒಂದು ವೇಳೆ ಕ್ರಯ ಪತ್ರ ಬರೆದುಕೊಡದೇ ಹೋದರೆ ಮತ್ತು ಮುಂಗಡ ಹಣ ಮುಟ್ಟು ಗೋಲು ಹಾಕುವ ಬಗ್ಗೆ ನಮೂದು ಇಲ್ಲಾ ಎಂದರೆ ಸರಿ. ಪ್ರತಿವಾದಿಗಳು ಮೊದಲು ಲಿಖಿತ ಹೇಳಿಕೆಯಲ್ಲಿ ಬಾಕಿ ಕ್ರಯದ ಹಣ ನೀಡಿದರೆ ಕ್ರಯಪತ್ರ ಬರೆದುಕೊಡುತ್ತೇವೆ ಎಂದರೆ ನನಗೆ ಗೊತ್ತಿಲ್ಲ. ನಾನು ಹಣ ಸರಿಪಡಿಸಿಕೊಳ್ಳಲು ನ್ಯಾಯಾಲಯದಲ್ಲಿ ಸಮಯ ಕೇಳಿರುತ್ತೇನೆ ಎಂದರೆ ಸಾಕ್ಷಿ ಅವರು ನಮೂನೆ 9 ಮತ್ತು 11 ಅನ್ನು ತಿದ್ದು ಪಡಿ ಮಾಡಿಸಿದರೆ ಹಣ ನೀಡುತ್ತೇನೆ ಎಂದು ಹೇಳಿರುತ್ತೇನೆ ಎಂದು ಹೇಳುವರು. ದಾಖಲೆಯ ತಿದ್ದು ಪಡಿ ಯಾವ ದಿನಾಂಕ ಆಗಿರುತ್ತದೆ ಎಂದು ನನಗೆ ನಿಖರವಾಗಿ ಗೊತ್ತಿಲ್ಲ ಆದರೆ ನ್ಯಾಯಾಲಯದಲ್ಲಿ ಹಣ ಕೇಳಿದ ನಂತರ ಆಗಿರುತ್ತದೆ ಎನ್ನುವರು. ನಾನು ಸದರಿ ದಾಖಲೆಗಳನ್ನು ಪಡೆದುಕೊಂಡು ನ್ಯಾಯಾಲಯದಲ್ಲಿ ಹಾಜರು ಪಡಿಸಿರುತ್ತೇನೆ. ನಾನು ನೀಡಿರುವ ಮುಂಗಡ ಹಣ ಒಟ್ಟು ಕ್ರಯದ ಹಣದಲ್ಲಿ ಶೇಕಡ 1 ಕಡಿಮೆ ಇರುತ್ತದೆ ಎಂದರೆ ಸರಿ. ದಿನಾಂಕ 23-04-2018 ರಂದು ನನ್ನ ಬಳಿ ಬಾಕಿ ಹಣ ಇರುವ ಬಗ್ಗೆ ದಾಖಲೆ ಇದೆಯಾ ಎಂದರೆ ಸಾಕ್ಷಿ ಇಲ್ಲಾ ಎನ್ನುವರು ಆದರೆ ನಾನು 2021 ನೇ ಇಸವಿಯಲ್ಲಿ ಮಾನ್ಯ ಉಚ್ಚನ್ಯಾಯಾಲಯದ ಮುಂದೆ ನಾನು ಉಳಿಕೆ ಹಣ ಜಮಾ ಮಾಡಿರುತ್ತೇನೆ. ನನ್ನ ಸಹೋದರರು ನನಗೆ ಹಣ ಸಹಾಯ ಮಾಡಿರುತ್ತಾರೆ ಆ ಹಣವನ್ನು ನಾನು

ನ್ಯಾಯಾಲಯದಲ್ಲಿ ಜಮಾ ಮಾಡಿರುತ್ತೇನೆ. ಸದರಿ ಮಾನ್ಯ ಉಚ್ಚ ನ್ಯಾಯಾಲಯದ ಮುಂದೆ ನಾನು ಸಲ್ಲಿಸಿದ ಅರ್ಜಿ ಮತ್ತು ಪ್ರಮಾಣ ಪತ್ರವನ್ನು ಈಗ ನ್ಯಾಯಾಲಯಕ್ಕೆ ನೀಡಿಲ್ಲ ಎಂದರೆ ಸರಿ. ನನ್ನ ಅಣ್ಣ-ತಮ್ಮಂದಿರು ಹಣ ಸಹಾಯ ಮಾಡಿದ ಬಗ್ಗೆ ಮೊದಲು ಎಂದೂ ನಾನು ಹೇಳಿರುವುದಿಲ್ಲ ಎಂದರೆ ಸಾಕ್ಷಿ ಅದು ನನ್ನ ವೈಯಕ್ತಿಕ ವಿಚಾರ ಎನ್ನುವರು.

ನಾನು ಇದೇ ನ್ಯಾಯಾಲಯದಲ್ಲಿ ಜಮೀನಿನ ವಿರುದ್ಧ ಓ.ಎಸ್. 07/2014 ರಂತೆ ಕ್ರಯ ಪತ್ರ ಬರೆದುಕೊಡಬೇಕೆಂದು ದಾವೆ ಹಾಕಿರುತ್ತೇನೆ ಎಂದರೆ ಸರಿ. ಸದರಿ ವಾದಪತ್ರದ ನಕಲನ್ನು ನಿ.ಡಿ.-1 ಎಂದು ಗುರುತಿಸಲಾಯಿತು. ಅದರಲ್ಲೂ ಸಹ ರೂ.80 ಲಕ್ಷ ವ್ಯಾಪಾರ ಮಾಡಿ ರೂ.70 ಸಾವಿರ ಮುಂಗಡ ಹಣ ನೀಡಿರುತ್ತೇವೆ ಎಂದರೆ ಸರಿ. ನಾನು ಇನ್ನೂ ಹೆಚ್ಚಾಗಿ ರೂ.4 ಲಕ್ಷ ನೀಡಿರುತ್ತೇನೆ ಎನ್ನುವರು. ಸದರಿ ದಾವೆ ಯಲ್ಲಿ ನಾನು ಆರ್ಥಿಕ ಸಾಮರ್ಥ್ಯ ಪಡಿಸಿರುವುದಿಲ್ಲ ಆದ್ದರಿಂದ ದಾವೆ ವಜಾ ಆಗಿರುತ್ತದೆ ಎಂದರೆ ಸರಿಯಲ್ಲ.

ನಾನು ನನ್ನ ಫೈನಾನ್ಸ್ ಅಪಹರಣ ಮಾಡಿರುತ್ತೇನೆ ಎಂದು ಹೇಳಿ ನನ್ನ ವಿರುದ್ಧ ದೂರು ದಾಖಲಾಗಿರುತ್ತದೆ ಎಂದರೆ ಸರಿಯಲ್ಲ. ನಾನು ಮತ್ತು ಶ್ರೀಕರ ಎಂಬುವವರು ಒಂದು ಫೈನಾನ್ಸ್ ಸಂಸ್ಥೆ ನಡೆಸುತ್ತಿದ್ದೆವು ಎಂದರೆ ಸರಿ. ಓ.ಎಸ್. 07/2014 ರಲ್ಲಿ ಸಾಕ್ಷಿಗೆ ತನ್ನ ಸಾಕ್ಷಿಯ ದೃಢೀಕೃತ ನಕಲನ್ನು ತೋರಿಸಿದ್ದು ಆತ ಅದನ್ನು ಒಪ್ಪಿದ ಮೇರೆಗೆ ನಿ.ಡಿ.- 2 ಎಂದು ಗುರುತಿಸಲಾಯಿತು.

ನಿ.ಪಿ.-3 ರಲ್ಲಿ ನಾನು ದಿನಾಂಕ 15-01-2021 ರಂದು ನಾನು ಉಪನೋಂದಾಣ ಅಧಿಕಾರಿ ಕಛೇರಿಯಲ್ಲಿ ಬರಲು ತಿಳಿಸಿರುತ್ತೇನೆ. ಆ ದಿನ ನಾನು

ಉಪನೋಂದಾಧಿಕಾರಿ ಕಛೇರಿ ಬಳಿ ಹೋಗಿರುತ್ತೇನೆ. ಆ ದಿನ ನಾನು ನೋಂದಣಿ ಕಛೇರಿ ಬಳಿ ಹೋಗಿರುತ್ತದೆ ಆದರೆ ನ್ಯಾಯಾಲಯಕ್ಕೆ ಹಾಜರು ಪಡಿಸಿರುವುದಿಲ್ಲ. ಕ್ರಯ ಪತ್ರ ನೋಂದಣಿ ಬಗ್ಗೆ ನನಗೆ ಹೆಚ್ಚಿನ ಮಾಹಿತಿ ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ. ರೂ.50 ಲಕ್ಷಕ್ಕಿಂತ ಹೆಚ್ಚು ಕ್ರಯದ ಪ್ರತಿಬಲ ಇದ್ದರೆ ಸರ್ಕಾರಕ್ಕೆ ಟಿ.ಡಿ.ಎಸ್. ಕಟ್ಟಬೇಕು ಎಂದರೆ ಗೊತ್ತಿಲ್ಲ. ಆ ರೀತಿ ಟಿ.ಡಿ.ಎಸ್. ಕಟ್ಟಲು ಪ್ಯಾನ್ ಕಾರ್ಡ್ ಬೇಕಾಗಬೇಕು ಎಂದರೆ ಗೊತ್ತಿಲ್ಲ. ನನಗೆ ಪ್ಯಾನ್ ಕಾರ್ಡ್ ಇರುವ ಬಗ್ಗೆ ದಾಖಲೆ ಕೊಟ್ಟಿಲ್ಲ ಎಂದರೆ ಸರಿ. ಸದರಿ ಪ್ಯಾನ್ ಕಾರ್ಡ್ ಪ್ರತಿಯನ್ನು 1 ನೇ ಪ್ರತಿವಾದಿಗೆ ನೀಡಿಲ್ಲ ಎಂದರೆ ಸರಿ. ನಾನು ಆ ದಿನ ಛಾಪಾ ಕಾಗದ ಹಣ ತುಂಬಿ ಛಾಪಾ ಕಾಗದ ತಯಾರು ಮಾಡಿಸಿರುತ್ತೇವೆ ಆದರೆ ಪ್ರತಿವಾದಿ ಬರಲಿಲ್ಲ. ಆ ವಿಚಾರ ವಾದ ಪತ್ರದಲ್ಲಿ ಹೇಳಿರುವುದಿಲ್ಲ ಎಂದರೆ ಸರಿ. 1 ನೇ ಪ್ರತಿವಾದಿ ಮತ್ತು ಆತನ ತಾಯಿ ಜೊತೆಗೆ ಮತ್ತು ಅವರ ತಂದೆ ಬೇರೆ ವಾಸ ಮಾಡುತ್ತಾರೆ ಎಂದರೆ ಸರಿ.

1 ನೇ ಪ್ರತಿವಾದಿ ತಾಯಿ ಮೂಲತಃ ಭೂಪಾಲ್ ನವರು ಎಂದರೆ ತಿಳಿದಿರುತ್ತದೆ ಎಂದರೆ ಸರಿ. 1 ನೇ ಪ್ರತಿವಾದಿ ತಾಯಿಗೆ ಕನ್ನಡ ಓದಲು ಬರೆಯಲು ಬರುವುದಿಲ್ಲ ಎಂದರೆ ಸರಿ. ಆಕೆಯ ಬಗ್ಗೆ ನನಗೆ ಹೆಚ್ಚಿನ ಮಾಹಿತಿ ಇರುವುದಿಲ್ಲ. 1 ನೇ ಪ್ರತಿವಾದಿ ಅವರ ತಾಯಿಗೆ ಕ್ಯಾನ್ಸರ್ ಇದ್ದು ಚಿಕಿತ್ಸೆಗೆ ಹಣ ಬೇಡಿಕೆ ಇಟ್ಟಿರುತ್ತಾರೆ ಎಂದರೆ ಸರಿಯಲ್ಲ. ನ್ಯಾಯಾಲಯದಲ್ಲಿಯೂ ಸಹ ಬಾಕಿ ಹಣ ನೀಡಬೇಕೆಂದು 1 ನೇ ಪ್ರತಿವಾದಿ ಕೇಳಿರುತ್ತಾರೆ ಎಂದರೆ ಸರಿ ಸಾಕ್ಷಿ ಮುಂದುವರೆದು ದಾಖೆ ಸರಿ ಇಲ್ಲದ ಕಾರಣ ನಾನು ಹಣ ನೀಡಿಲ್ಲ ಎನ್ನುವರು. ದಾಖಲೆ ಸರಿ

ಇರುವುದಿಲ್ಲ. ಆ ಕಾರಣ ಹಣ ನೀಡುವುದಿಲ್ಲ ಎಂದು ನಾನು ನ್ಯಾಯಾಲಯಕ್ಕೆ ಪ್ರಮಾಣ ಪತ್ರ ಸಲ್ಲಿಸಿರುವುದಿಲ್ಲ ಆದರೆ ನಮ್ಮ ವಕೀಲರಿಗೆ ತಿಳಿಸಿರುತ್ತೇನೆ.

ದಾವಾ ಸ್ವತ್ತನ್ನು 1 ನೇ ಪ್ರತಿವಾದಿ 2 ನೇ ಪ್ರತಿವಾದಿಗೆ ಈ ದಾವಾ ಹಾಕಿದ ನಂತರ ಮಾರಾಟ ಮಾಡಿರುತ್ತಾರೆ ಎಂದರೆ ಸರಿ. ಸದರಿ ಕ್ರಯಪತ್ರದಲ್ಲಿ ಚೆಕ್ ಮುಖಾಂತರ ಹಣ ಪಡೆದು ಕ್ರಯಪತ್ರದಲ್ಲಿ ನಮೂದು ಇರುತ್ತದೆ ಎಂದರೆ ಸರಿ. ನನಗೆ ಮಾರಾಟ ಮಾಡಿರುವ ಹಣದಿಂದ ಹೆಚ್ಚಿನ ಹಣಕ್ಕೆ 1 ನೇ ಪ್ರತಿವಾದಿ 2 ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿ. ಸದರಿ ದಾವಾ ಸ್ವತ್ತಿನ ಖಾತೆ ಈಗ 2 ನೇ ಪ್ರತಿವಾದಿಯ ಹೆಸರಿನಲ್ಲಿ ಬಂದಿರುತ್ತದೆ ಎಂದರೆ ಗೊತ್ತಿಲ್ಲ. ನಾನು ನೋಡಿಲ್ಲ ಎನ್ನುವರು.

ಮುಂದುವರಿದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು ನೀಡಿಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.)

**(**ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿರುತ್ತಾರೆ**.)**

ಪ್ರಧಾನ ಹಿರಿಯ ವ್ಯವಹಾರ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ. ದಂಡಾಧಿಕಾರಿಗಳು, ಸಾಗರ.